ಸುಮಾತ್ರಾದ ಘೇಂಡಾಮೃಗ ಗಾತ್ರದಲ್ಲಿ ಉಳಿದ ಎಲ್ಲಾ ಘೇಂಡಾಮೃಗಗಳಿಗಿಂತ ಚಿಕ್ಕದಿದ್ದು, 600 ಕಿಲೋಗ್ರಾಂವರೆಗೆ ತೂಗುತ್ತದೆ. ಬಿಳಿ ರೈನೋ ಗರಿಷ್ಠ 3500 ಕಿಲೋಗ್ರಾಂ ತೂಗುತ್ತದೆ.

ಉದ್ಯಾನವನವನ್ನು 'ಸಂರಕ್ಷಿತ ತಾಣವಲ್ಲ' ಎಂದು ಘೋಷಿಸುವಂತಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯವು ಬಹಳ ಹಿಂದೆಯೇ ಹೇಳಿದೆ. ಇದು ನಿಮಗೆ ತಿಳಿದಿಲ್ಲವೇ ಎಂದು ಸರ್ಕಾರಕ್ಕೆ ಚಾಟಿ ಬೀಸಿರುವ ನ್ಯಾಯಪೀಠವು ವಿವರಣಾತ್ಮಕ ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶನ ನೀಡಿದೆ.

## ತಪ್ಪು ಸರಿಪಡಿಸಲು ಕಾಲು ಶತಮಾನ?

25 ವರ್ಷಗಳ ಹಿಂದಿನ ನಿರ್ಧಾರ ಸರಿ ಇರಲಿಲ್ಲ, ಅಂದು ನಡೆದ ತಪ್ಪನ್ನು ಸರಿಪಡಿಸಲು ಈ ಕ್ರಮಕ್ಕೆ ಮುಂದಾಗಿದ್ದೇವೆ ಎಂದು ವಾದಿಸಿದ ರಾಜ್ಯ ಸರ್ಕಾರದ ವಕೀಲರನ್ನು 'ಅರಣ್ಯ ಇಲಾಖೆಯ ತಪ್ಪು ನಿಮಗೆ ಗೊತ್ತಾಗಲು 25 ವರ್ಷಗಳು ಬೇಕಾಯಿತೆ?' ಎಂದು ಖಾರವಾಗಿ ಪ್ರಶ್ನಿಸಿ, ಆದಿವಾಸಿಗಳ ಹಕ್ಕಿನ ರಕ್ಷಣೆಗೆ ಅಭಯಾರಣ್ಯದ ಆದೇಶ ಹಿಂಪಡೆಯುವುದರ ಅಗತ್ಯವಿಲ್ಲ. ಬದಲಿಗೆ ಅವರಿಗೆ ಏನೇನು ಸಿಗಬೇಕೋ ಅದರ ವ್ಯವಸ್ಥೆ ಮಾಡುವುದರತ್ತ ತುರ್ತು ಗಮನಹರಿಸಿ ಎಂದಿದೆ. ಈ ಮೂಲಕ ನ್ಯಾಯಪೀಠವು ಅಪರೂಪದ ಒಂಟಿಕೊಂಬಿನ ಘೇಂಡಾಮೃಗ ರಕ್ಷಣೆಗೆ ಆದ್ಯತೆ ನೀಡಿದೆ.

## ಜೀವವೈವಿಧ್ಯದ ಕೊಂಡಿ

ಆಫ್ರಿಕಾ ಮತ್ತು ಏಷ್ಯಾದ ಕಾಡುಗಳಲ್ಲಿ ಮಾತ್ರ ಇರುವ ರೈನೋಗಳು ಜೀವವೈವಿಧ್ಯದ ಪ್ರಮುಖ ಕೊಂಡಿಗಳು. ಆದರೆ ಅವುಗಳ ಕೊಂಬಿನಲ್ಲಿ ಮನುಷ್ಯನ ಕೆಲವು ಕಾಯಿಲೆಗಳಿಗೆ ಔಷಧಿ ಇದೆ ಎಂಬ ತಪ್ಪು ಗ್ರಹಿಕೆಯಿಂದ ರೈನೋಗಳ ಬೇಟೆ ಅನಿಯಂತ್ರಿತವಾಗಿ ನಡೆಯುತ್ತಿದೆ. ಆಫ್ರಿಕಾದಲ್ಲಿ ಪ್ರತಿ ಗಂಟೆಗೆ ಎರಡು ರೈನೋಗಳ ಹತ್ಯೆಯಾಗುತ್ತಿದೆ. ಕಳೆದ ಶತಮಾನದ ಆರಂಭದಲ್ಲಿ 5 ಲಕ್ಷದಷ್ಟು ಇದ್ದ ಅವುಗಳ ಸಂಖ್ಯೆ ಈಗ ವಿಶ್ವದಲ್ಲಿ ಕೇವಲ 30,000ಕ್ಕೆ ಇಳಿದಿದೆ.

## ಸಮುದಾಯಗಳ ಸಹಭಾಗಿತ್ವ

ಆರು ದಶಕಗಳ ಹಿಂದೆ ನಮ್ಮಲ್ಲಿ ಕೇವಲ 366 ರೈನೋಗಳಿದ್ದವು. ಉತ್ತಮ ಸಂರಕ್ಷಣಾ ಕೆಲಸಗಳಿಂದಾಗಿ ಈಗ ಅವುಗಳ ಸಂಖ್ಯೆ 3000 ದಾಟಿದೆ. ಸ್ಥಳೀಯ ಸಮುದಾಯಗಳ ಸಹಭಾಗಿತ್ವ ಮತ್ತು ಅರಣ್ಯ ಇಲಾಖೆಯ ಕಟ್ಟುನಿಟ್ಟಿನ ಕ್ರಮಗಳು ರೈನೋಗಳನ್ನು ರಕ್ಷಿಸಿವೆ.

ನಮ್ಮ ಉಗುರು ಮತ್ತು ಕೂದಲುಗಳಲ್ಲಿ ಕಂಡುಬರುವ ಕೆರಾಟಿನ್ ಪ್ರೊಟೀನು ಸಂಯುಕ್ತದಿಂದ ಕೂಡಿದ ಕೆಲವು ಬಗೆಯ ವಿಶೇಷ ಕೂದಲುಗಳು ಒತ್ತೊತ್ತಾಗಿ ಕೂಡಿಕೊಂಡು ಬಿರುಸುಗೊಂಡು ಈ ಕೊಂಬುಗಳ ರಚನೆಯಾಗುತ್ತದೆ.



ವಾಸ್ತವದಲ್ಲಿ ಬಿಳಿ ಕಪ್ಪು ಬಣ್ಣದ ರೈನೋಗಳು ಇಲ್ಲ. ಬೂದು ಬಣ್ಣದ ರೈನೋಗಳನ್ನು ಆಯಾ ಭೌಗೋಳಿಕ ಪ್ರದೇಶಗಳಲ್ಲಿ ಬಿಳಿ ಮತ್ತು ಕಪ್ಪು ಎಂದು ಗುರುತಿಸುತ್ತಾರೆ.

ಕ್ಯಾನ್ಸರ್ ಮತ್ತು ಪುರುಷರ ಲೈಂಗಿಕ ಸಮಸ್ಯೆಯನ್ನು ಗುಣಪಡಿಸುವ ರಾಸಾಯನಿಕಗಳು ರೈನೋಗಳ ಕೊಂಬಿನಲ್ಲಿವೆ ಎಂಬ ಅವೈಜ್ಞಾನಿಕ ಗ್ರಹಿಕೆಯಿಂದ ಅವುಗಳ ಕಳ್ಳಬೇಟೆ ನಡೆಯುತ್ತಲೇ ಇದೆ.

ದೇಶದ ಅರಣ್ಯಗಳಲ್ಲಿರುವ 3262 ರೈನೋಗಳ ಪೈಕಿ 2645, ಅಸ್ಸಾಂ ರಾಜ್ಯದ ವಿವಿಧ ಅಭಯಾರಣ್ಯ, ಉದ್ಯಾನವನಗಳಾದ ಕಾಜಿರಂಗ, ಪೊಬಿಟೋರ, ಜಲ್ದಪಾರಗಳಲ್ಲಿ ಸುಭದ್ರ ಆವಾಸಗಳನ್ನು ಹೊಂದಿವೆ. ಉತ್ತರ ಪ್ರದೇಶದ ಧುದ್ವ ಮತ್ತು ಪಶ್ಚಿಮ ಬಂಗಾಳದ ಗೊರುಮಾರ ರಾಷ್ಟ್ರೀಯ ಉದ್ಯಾನವನದಲ್ಲೂ ಹೆಚ್ಚಿನ ಸಂಖ್ಯೆಯ ರೈನೋಗಳಿವೆ. ಕೊಯಮತ್ತೂರಿನ ಜೂ ಔಟ್ರೀಚ್ ಸಂಸ್ಥೆ, ಟೆಕ್ಸಾಸ್ ಮೂಲದ ಇಂಟರ್‌ನ್ಯಾಷನಲ್ ರೈನೋ ಫೌಂಡೇಶನ್ ಮತ್ತು ಡಬ್ಲ್ಯುಡಬ್ಲ್ಯುಎಫ್‌ಗಳು ರೈನೋಗಳ ರಕ್ಷಣೆಗೆ ನಿರಂತರ ಪ್ರಯತ್ನ ಮಾಡುತ್ತಿವೆ. ಈಗ ಭಾರತದ ಅತ್ಯುನ್ನತ ನ್ಯಾಯಾಲಯವೂ ರಕ್ಷಣೆಗೆ ನಿಂತಿದೆ.

